| | |
|---|---|
| Test Paper : **II**<br>Test Subject : **LAW**<br>Test Subject Code : **K-1817** | Test Booklet Serial No. : __________<br>OMR Sheet No. : __________<br>Roll No.<br>(Figures as per admission card) |

**Name & Signature of Invigilator/s**

Signature : ________________

Name : ________________

**Paper : II**

**Subject : LAW**

Time : 1 Hour 15 Minutes | Maximum Marks : 100

Number of Pages in this Booklet : **20** | Number of Questions in this Booklet : **50**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು.** OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside the Paper I Booklet only**. If you mark at any place other than in the circles in the OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**



downloaded from: www.kpscvaani.com

Total Number of Pages : 20

## ಕಾನೂನು
## ಪೇಪರ್ – II

**ಗಮನಿಸಿ :** ಈ ಪತ್ರಿಕೆಯು **(50) ಐವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** ಪೀಠಿಕೆಯಲ್ಲಿ ಭಾರತದ ಸಂವಿಧಾನದ ವಿಶೇಷತೆಗಳ ಸರಿಯಾದ ಅನುಕ್ರಮಿಕೆ ಹೀಗಿವೆ

(A) ಸಾರ್ವಭೌಮ,ಸಮಾಜವಾದಿ, ಧರ್ಮನಿರಪೇಕ್ಷಕ, ಪ್ರಜಾಸತ್ತಾತ್ಮಕ, ಪ್ರಜಾರಾಜ್ಯ

(B) ಸಾರ್ವಭೌಮ,ಧರ್ಮನಿರಪೇಕ್ಷಕ, ಸಮಾಜವಾದಿ, ಪ್ರಜಾರಾಜ್ಯ, ಪ್ರಜಾಸತ್ತಾತ್ಮಕ

(C) ಸಾರ್ವಭೌಮ,ಪ್ರಜಾಸತ್ತಾತ್ಮಕ,ಧರ್ಮನಿರಪೇಕ್ಷಕ, ಸಮಾಜವಾದಿ,ಪ್ರಜಾರಾಜ್ಯ

(D) ಸಾರ್ವಭೌಮ, ಪ್ರಜಾರಾಜ್ಯ, ಪ್ರಜಾಸತ್ತಾತ್ಮಕ, ಧರ್ಮನಿರಪೇಕ್ಷಕ, ಸಮಾಜವಾದಿ

**2.** ಸಂಕೇತಗಳನ್ನು ಬಳಸುವ ಮೂಲಕ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಮೂಲಭೂತ ಹಕ್ಕಿನ ಮೇಲೆ ಸುಪ್ರೀಂ ಕೋರ್ಟಿನ ಈ ಕೆಳಗಿನ ತೀರ್ಮಾನಗಳನ್ನು ಸರಿಯಾದ ಕಾಲಾನುಕ್ರಮಣಿಕೆಯಲ್ಲಿ ವ್ಯವಸ್ಥೆಗೊಳಿಸಿರಿ.

1. ಮನೇಕಾ ಗಾಂಧಿ Vs ಭಾರತ ಸರಕಾರ
2. ಎ. ಡಿ.ಎಂ. ಜಬಲ್ಪುರ್ Vs ಶಿವಹಂತ್ ಶುಕ್ಲ
3. ಎ. ಕೆ. ಗೋಪಾಲನ್ Vs ಮದ್ರಾಸ್ ಸರಕಾರ

**ಸಂಕೇತಗಳು :**

(A) 3, 2, 1 (B) 2, 1, 3
(C) 2, 3, 1 (D) 1, 2, 3

**3.** ಸಂವಿಧಾನದ ಎಷ್ಟನೆಯ ತಿದ್ದುಪಡಿ ಮೂಲಕ ತಮ್ಮ ಮಕ್ಕಳನ್ನು14 ನೆಯ ವಯಸ್ಸಿನವರೆಗೆ ಶಾಲೆಗೆ ಕಳುಹಿಸಲು ಮೂಲಭೂತ ಹಕ್ಕನ್ನು ಹೆತ್ತವರ ಮೇಲೆ ಹೇರಲಾಯಿತು ?

(A) 81 ನೆಯ ತಿದ್ದುಪಡಿ

(B) 83 ನೆಯ ತಿದ್ದುಪಡಿ

(C) 82 ನೆಯ ತಿದ್ದುಪಡಿ

(D) 86 ನೆಯ ತಿದ್ದುಪಡಿ

**4.** ಕೆಳಗಿನವುಗಳನ್ನು ಪರಿಗಣಿಸಿರಿ.

i. ರಾಷ್ಟ್ರೀಯ ತುರ್ತುಪರಿಸ್ಥಿತಿ
ii. ಅಂತಾರಾಷ್ಟ್ರೀಯ ಒಪ್ಪಂದಗಳನ್ನು ಜಾರಿಗೆತರುವುದು
iii. ರಾಷ್ಟ್ರಪತಿ ಆಡಳಿತ

ಮೇಲಿನ ಪರಿಸ್ಥಿತಿಗಳಲ್ಲಿ ಯಾವುದು ರಾಜ್ಯ ಪಟ್ಟಿಯಲ್ಲಿ ನಮೂದನೆಗೊಂಡ ಯಾವುದೇ ವಿಷಯದ ಮೇಲೆ ಕಾನೂನು ಮಾಡಲು ಸಂಸತ್ತಿಗೆ ಅಧಿಕಾರ ನೀಡುತ್ತದೆ ?

(A) i ಮತ್ತು ii (B) ii ಮತ್ತು iii
(C) i ಮತ್ತು iii (D) i, ii ಮತ್ತು iii

**5.** **ಪ್ರತಿಪಾದನೆ (A)** : ಭಾರತದ ರಾಷ್ಟ್ರಾಧ್ಯಕ್ಷರಿಗೆ ಶಿಕ್ಷೆಗೆ ಕ್ಷಮಾದಾನ ನೀಡಲು, ಮುಂದೂಡಲು, ವಿಶ್ರಾಂತಿ ನೀಡಲು ಅಥವಾ ಉಪಶಮನಗೊಳಿಸಲು ಇತ್ಯಾದಿ ಅಧಿಕಾರವಿದೆ.

**ತರ್ಕ (R)** : ರಾಷ್ಟ್ರಾಧ್ಯಕ್ಷರು ಕಾರ್ಯಾಂಗದ ಕಾರ್ಯಗಳನ್ನು ಮಾತ್ರವಲ್ಲದೆ ನ್ಯಾಯಾಂಗದ ಕಾರ್ಯಗಳನ್ನು ಕೂಡ ಚಲಾಯಿಸುತ್ತಾರೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಸತ್ಯ, ಆದರೆ (R) (A) ಯ ಸರಿಯಾದ ವಿವರಣೆ ಆಗಿರುವುದಿಲ್ಲ

(B) (A) ಮತ್ತು (R) ಸತ್ಯವಾಗಿವೆ ಮತ್ತು (R), (A) ಯ ಸರಿಯಾದ ವಿವರಣೆ ಆಗಿರುತ್ತದೆ

(C) (A) ಸತ್ಯವಾಗಿದೆ, ಆದರೆ (R) ಸುಳ್ಳಾಗಿದೆ

(D) (A) ಸುಳ್ಳಾಗಿದೆ, ಆದರೆ (R) ಸತ್ಯವಾಗಿದೆ

**6.** ರಾಜ್ಯಗಳ ನಡುವಿನ ವಿವಾದಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಇದರಡಿ ಬರುತ್ತವೆ.

(A) ಮೇಲ್ಮನವಿ ನ್ಯಾಯಾಂಗ ವ್ಯಾಪ್ತಿ

(B) ಸಲಹಾ ನ್ಯಾಯಾಂಗ ವ್ಯಾಪ್ತಿ

(C) ಅಸಾಮಾನ್ಯ ನ್ಯಾಯಾಂಗ ವ್ಯಾಪ್ತಿ

(D) ಮೂಲ ನ್ಯಾಯಾಂಗ ವ್ಯಾಪ್ತಿ



downloaded from: www.kpscvaani.com

# LAW
## Paper – II

**Note :** This paper contains **fifty (50)** objective type questions. **Each** question carries **two (2)** marks. **All** questions are **compulsory**.

**1.** The correct order of the features of the Indian Constitution in Preamble is

(A) Sovereign, Socialist, Secular, Democratic, Republic

(B) Sovereign, Secular, Socialist, Republic, Democratic

(C) Sovereign, Democratic, Secular, Socialist, Republic

(D) Sovereign, Republic, Democratic, Secular, Socialist

**2.** Arrange the following divisions of the Supreme Court on fundamental right relating to personal liberty in the correct chronological sequence by using the codes.

1. Maneka Gandhi V/s Union of India
2. A.D.M. Jasallpur V/s Shivahanth Shukla
3. A.K. Gopalan V/s State of Madras

**Codes :**

(A) 3, 2, 1 (B) 2, 1, 3

(C) 2, 3, 1 (D) 1, 2, 3

**3.** By which Amendment to the Constitution, the fundamental duty to send their children for school upto age of 14 years was imposed on parents ?

(A) $81^{st}$ Amendment

(B) $83^{rd}$ Amendment

(C) $82^{nd}$ Amendment

(D) $86^{th}$ Amendment

**4.** Consider the following statements.

i. National Emergency

ii. Implementing International Agreements

iii. President's rule

Which of the above condition empowers the parliament to make laws on any matter enumerated in the state list ?

(A) i and ii (B) ii and iii

(C) i and iii (D) i, ii and iii

**5.** **Assertion (A)** : The President of India has the power to pardon, reprieve, respite or remission of punishment etc.

**Reason (R)** : The President exercises not only executive functions but also judicial functions.

**Codes :**

(A) Both (A) and (R) are true but (R) is not correct explanation of (A)

(B) Both (A) and (R) are true and (R) is correct explanation of (A)

(C) (A) is true but (R) is false

(D) (A) is false but (R) is true

**6.** Disputes between states in India come to the Supreme Court under

(A) Appellate Jurisdiction

(B) Advisory Jurisdiction

(C) Extra-ordinary Jurisdiction

(D) Original Jurisdiction



downloaded from: www.kpscvaani.com

**7.** ಪಟ್ಟಿ – Iನ್ನು ಪಟ್ಟಿ – II ರೊಂದಿಗೆ ಹೊಂದಿಸಿ, ಕೆಳಗೆ ನೀಡಲಾದ ಸಂಕೇತಗಳನ್ನು ಬಳಸುವ ಮೂಲಕ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

| ಪಟ್ಟಿ – I | ಪಟ್ಟಿ – II |
|---|---|
| a. ಹೇಬಿಯಸ್ ಕಾರ್ಪಸ್ | 1. ಸಾರ್ವಜನಿಕ ಕರ್ತವ್ಯವನ್ನು ಪಾಲಿಸದಿರುವುದು |
| b. ಮಾಂಡಮಸ್ | 2. ತಪ್ಪಾಗಿ ಬಂಧನದಲ್ಲಿರಿಸುವುದು |
| c. ಕ್ವೊ-ವಾರಂಟೊ | 3. ಅಧೀನ ನ್ಯಾಯಾಲಯಗಳಿಗೆ ತಿದ್ದುಪಡಿ ನಿರ್ದೇಶನ ನೀಡುವುದು |
| d. ಸರ್ಷಿಯೋರರಿ | 4. ಸಾರ್ವಜನಿಕ ಆಫೀಸನ್ನು ಕಾನೂನು ಬಾಹಿರವಾಗಿ ಆಕ್ರಮಿಸುವುದು |
| | 5. ಡಬಲ್ ಜೆಪರ್ಡಿ (ಒಂದೇ ತಪ್ಪಿಗಾಗಿ ಎರಡು ಬಾರಿ ಶಿಕ್ಷೆಗೊಳಪಡಿಸುವುದು) |

**ಸಂಕೇತಗಳು :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 2 | 1 | 4 | 3 |
| (C) | 3 | 1 | 2 | 5 |
| (D) | 4 | 5 | 1 | 2 |

**8.** ‘ಅನ್ಯಾಯದ ಕಾನೂನು ಕಾನೂನಲ್ಲ’ ಎಂದು ಇವರಿಂದ ಪ್ರತಿಪಾದಿಸಲ್ಪಟ್ಟಿತು

(A) ಸಹಜ ಕಾನೂನು ತತ್ವಜ್ಞಾನಿಗಳು

(B) ಪ್ರತ್ಯಕ್ಷವಾದಿ ತತ್ವಜ್ಞಾನಿಗಳು

(C) ಕ್ರಿಯಾಶೀಲ ನ್ಯಾಯಾಧೀಶರು

(D) ವಾಸ್ತವವಾದಿ ನ್ಯಾಯಾಧೀಶರು

**9.** ನ್ಯಾಯಶಾಸ್ತ್ರವನ್ನು ‘‘ಔಪಚಾರಿಕ ವಿಜ್ಞಾನದ ಸಕಾರಾತ್ಮಕ ಕಾನೂನು’’ ಎಂದು ಯಾರು ವ್ಯಾಖ್ಯಾನಿಸಿದ್ದಾರೆ ?

(A) ಬೆಂಥಾಮ್  (B) ಬ್ಲಾಕ್ ಸ್ಟೋನ್

(C) ಹೋಲ್ಯಾಂಡ್  (D) ಉಲ್ಪನಿಯನ್

**10.** ಕೆಳಗಿನವುಗಳಲ್ಲಿ ಯಾವುದು ಪೌಂಡ್‌ರವರ ನ್ಯಾಯಶಾಸ್ತ್ರ ಸಿದ್ಧಾಂತದ ಘಟಕವಾಗಿರುವುದಿಲ್ಲ ?

(A) ಸಾಮಾಜಿಕ ಎಂಜಿನಿಯರಿಂಗ್

(B) ಸ್ಪರ್ಧಾತ್ಮಕ ಹಿತಾಸಕ್ತಿಗಳನ್ನು ಸಮತೋಲನದಲ್ಲಿಡುವುದು

(C) ಮಾನವ ಅವಶ್ಯಕತೆಗಳ ಮತ್ತು ಬಯಕೆಗಳ ಸಂತೃಪ್ತಿ

(D) ಚಾರಿತ್ರಿಕ ಸಂಗತಿಗಳು

**11.** ‘ಪೊಸೆಶನ್’ (ಸ್ವಾಧೀನ) ಎಂಬುವುದು

(A) ಮಾಲೀಕತ್ವದ 5 ಅಂಶಗಳು

(B) ಮಾಲೀಕತ್ವದ 9 ಅಂಶಗಳು

(C) ಮಾಲೀಕತ್ವದ 7 ಅಂಶಗಳು

(D) ಮಾಲೀಕತ್ವದ 10 ಅಂಶಗಳು

**12.** ಪಟ್ಟಿ – I (ಕಾನೂನು ಹಕ್ಕು)ನ್ನು ಪಟ್ಟಿ – II (ಕಾನೂನು ಹಕ್ಕಿನ ಸ್ವರೂಪ)ದೊಂದಿಗೆ ಸರಿಹೊಂದಿಸಿ, ಕೆಳಗೆ ನೀಡಲಾದ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

| ಪಟ್ಟಿ – I | ಪಟ್ಟಿ – II |
|---|---|
| I. ಅವಧಿ ಮೀರಿದ ಸಾಲ | a. ವೈಯಕ್ತಿಕ ಹಕ್ಕು |
| II. ಕೀರ್ತಿ ಹಕ್ಕು | b. ವ್ಯಕ್ತಿಬಂಧಕ ಹಕ್ಕು |
| III. ಶಾರೀರಿಕ ಸಮಗ್ರತೆಯ ಹಕ್ಕು | c. ಅಪರಿಪೂರ್ಣ ಹಕ್ಕು |
| IV. ಕಾಂಟ್ರಾಕ್ಟ್‌ನಿಂದ ಬರುವ ಹಕ್ಕು | d. ಸರ್ವಬಂಧಕ ಹಕ್ಕು |

**ಸಂಕೇತಗಳು :**

| | I | II | III | IV |
|---|---|---|---|---|
| (A) | c | d | b | a |
| (B) | c | b | a | d |
| (C) | b | c | a | d |
| (D) | c | d | a | b |



downloaded from: www.kpscvaani.com

**7.** Match List – I with List – II and select the correct answer by using the code given below :

| List – I | List – II |
|---|---|
| a. Habeas corpus | 1. Non performance of public duty |
| b. Mandamus | 2. Unlawful detention |
| c. Quo-warranto | 3. Correctional direction to subordinate courts |
| d. Certiorari | 4. Unlawful occupation of public office |
| | 5. Double Jeopardy |

**Codes :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 2 | 1 | 4 | 3 |
| (C) | 3 | 1 | 2 | 5 |
| (D) | 4 | 5 | 1 | 2 |

**8.** The idea that 'unjust law is no law' was propounded by

(A) Natural law philosophers

(B) Positivist philosophers

(C) Activist Judges

(D) Realist Judges

**9.** Who has defined jurisprudence as "The formal science of positive law" ?

(A) Bentham (B) Blackstone

(C) Holland (D) Ulpanian

**10.** Which of the following is not a component of Pound's theory of jurisprudence ?

(A) Social Engineering

(B) Balancing of competing interests

(C) Satisfaction of human wants and desires

(D) Historical facts

**11.** The possession is the

(A) Five points in ownership

(B) Nine points in ownership

(C) Seven points in ownership

(D) Ten points in ownership

**12.** Match List – I (Legal Right) with List – II (Nature of Legal Right) and select the correct answer by using the codes given below :

| List – I | List – II |
|---|---|
| I. Time barred debt | a. Personal right |
| II. Right to reputation | b. Right in personam |
| III. Right to physical integrity | c. Imperfect right |
| IV. Right arising out of a contract | d. Right in rem |

**Codes :**

| | I | II | III | IV |
|---|---|---|---|---|
| (A) | c | d | b | a |
| (B) | c | b | a | d |
| (C) | b | c | a | d |
| (D) | c | d | a | b |



downloaded from: www.kpscvaani.com

**13.** ಸ್ವಾಧೀನವು ಮಾಲೀಕತ್ವ ಹಕ್ಕಿನ ಮೇಲ್ನೋಟದ ಸಾಕ್ಷಿಯಾಗಿದೆ, ಆದುದರಿಂದ

(A) ದೀರ್ಘಕಾಲದ ಪ್ರತಿಕೂಲ ಸ್ವಾಧೀನವು ಮೂಲತಃ ಬೇರೊಬ್ಬನಿಗೆ ಸೇರಿದ ಆಸ್ತಿಯ ಮೇಲೂ ಟೈಟಲನ್ನು ನೀಡುತ್ತದೆ

(B) ಎಲ್ಲಾ ಪ್ರಕರಣಗಳಲ್ಲೂ, ಸ್ವಾಧೀನವು ಮಾಲೀಕತ್ವಕ್ಕೆ ಹೇತುವಾಗುತ್ತದೆ

(C) ಸ್ವಾಧೀನ ವರ್ಗಾವಣೆಯು ಮಾಲೀಕತ್ವ ವರ್ಗಾವಣೆಯ ಒಂದು ವಿಧಾನವಾಗಿರುವುದಿಲ್ಲ

(D) ದೀರ್ಘಕಾಲದ ಪ್ರತಿಕೂಲ ಸ್ವಾಧೀನವು ಮೂಲತಃ ಬೇರೆಯವರಿಗೆ ಸೇರಿದ ಆಸ್ತಿಯ ಮೇಲೆ ಟೈಟಲ್ ಅನುಗ್ರಹಿಸುವುದಿಲ್ಲ

**14.** ''ಒಂದು ಕಣ್ಣಿಗೆ ಒಂದು ಕಣ್ಣು'' ಮತ್ತು ''ಒಂದು ಹಲ್ಲಿಗೆ ಒಂದು ಹಲ್ಲು'' ಎಂಬುವುದು ಇದಕ್ಕೆ ಸಂಬಂಧಿಸಿದೆ

(A) ಸುಧಾರಣಾತ್ಮಕ ಸಿದ್ಧಾಂತ

(B) ನಿರೋಧಕ ಸಿದ್ಧಾಂತ

(C) ಪುನರುಜ್ಜೀವನ ಸಿದ್ಧಾಂತ

(D) ತಡೆಗಟ್ಟುವಿಕೆ ಸಿದ್ಧಾಂತ

**15.** ಕೆಳಗಿನ ಸಿದ್ಧಾಂತಗಳಲ್ಲಿ ಯಾವುದು ಒಪ್ಪಂದವೊಂದರ ಪಾರ್ಟಿಯು ಒಪ್ಪಂದದ ನಿಯಮಗಳನ್ನು ಸುನಿಷ್ಠೆಯಿಂದ ಪಾಲಿಸಬೇಕೆಂದು ವಿಧಿಸುತ್ತದೆ ?

(A) ಡ್ರ್ಯಾಗೋ ಸಿದ್ಧಾಂತ

(B) ಆಶ್ರಯ ಹಕ್ಕು

(C) ಸಮಾನತೆ ಸಿದ್ಧಾಂತ

(D) ಒಪ್ಪಂದಗಳನ್ನು ಕಾಯ್ದುಕೊಳ್ಳಬೇಕು

**16.** 'ದ್ವಿರೂಪತೆ' (ಡ್ಯೂಅಲಿಸಂ) ಅಂತರರಾಷ್ಟ್ರೀಯ ಕಾನೂನು ಮತ್ತು ರಾಜ್ಯ (ರಾಷ್ಟ್ರ ) ಕಾನೂನನ್ನು ಸೂಚಿಸುತ್ತದೆ

(A) ಎರಡು ಸಂಪೂರ್ಣ ವಿಭಿನ್ನ ಕಾನೂನು ವ್ಯವಸ್ಥೆಗಳನ್ನು ಪ್ರತಿನಿಧಿಸುತ್ತದೆ

(B) ಸಾಮಾನ್ಯ ರೂಪದ ಒಂದು ವ್ಯವಸ್ಥೆ ಕಾನೂನಿನ ಸಹಗಾಮಿ ಸ್ಥಿತಿಗಳಾಗಿವೆ

(C) ಜಾರಿಗೆ ತರಲು ಆಗುವುದಿಲ್ಲ

(D) ನಿರ್ಬಂಧಕ್ಕೊಳಪಡಿಸುವುದಿಲ್ಲ

**17.** ಕೆಳಗಿನ ಹೇಳಿಕೆಗಳಲ್ಲಿ ಯಾವುದು ರಾಜ್ಯಗಳ ಮಾನ್ಯತೆಯು ಡಿಕ್ಲರೇಟರಿ ಸಿದ್ಧಾಂತದೊಂದಿಗೆ ಸಂಸರ್ಗ ಹೊಂದಿವೆ ?

I. ಮಾನ್ಯತೆಯು ಈಗಿರುವ ಸಂಗತಿಗಳ ಘೋಷಣಾತ್ಮಕವಾಗಿರುವುದು

II. ಮಾನ್ಯತೆಯು ಈಗಿರುವ ಸಂಗತಿಗಳ ರಚನೆಯಾಗಿರುವುದು

III. ಮಾನ್ಯತೆಯು ಅಂತರರಾಷ್ಟ್ರೀಯ ಸಮುದಾಯದ ಸದಸ್ಯತ್ವಕ್ಕೆ ನಿರ್ಣಾಯಕವಾಗಿರುತ್ತದೆ

IV. ಮಾನ್ಯತೆಯು ಒಂದು ರಾಜಕೀಯ ಕ್ರಮ

**ಸಂಕೇತಗಳು :**

(A) I ಮತ್ತು II

(B) I, III ಮತ್ತು IV

(C) II ಮತ್ತು III

(D) I ಮತ್ತು IV

**18.** **ಪ್ರತಿಪಾದನೆ (A) :** ಯು. ಎನ್. ಶಾಂತಿಪಾಲನೆ ಕಾರ್ಯಾಚರಣೆಗಳಿಗೆ ಅಧಿಕಾರ ನೀಡುವ ಅಧಿಕಾರ ಯು. ಎನ್. ಜನರಲ್ ಅಸೆಂಬ್ಲಿಗೆ ಇದೆ.

**ತರ್ಕ (R) :** ಜನರಲ್ ಅಸೆಂಬ್ಲಿಯು ಸಂಯುಕ್ತ ರಾಷ್ಟ್ರಗಳ ಇಡೀ ಸದಸ್ಯತ್ವವನ್ನು ಪ್ರತಿನಿಧಿಸುತ್ತದೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಸರಿಯಾಗಿವೆ ಮತ್ತು (R), (A) ಯ ಸರಿಯಾದ ವಿವರಣೆಯಾಗಿದೆ

(B) (A) ಮತ್ತು (R) ಎರಡೂ ಸತ್ಯವಾಗಿವೆ ಆದರೆ (R), (A) ಯ ಸರಿಯಾದ ವಿವರಣೆ ಆಗಿರುವುದಿಲ್ಲ

(C) (A) ನಿಜವಾಗಿದೆ, ಆದರೆ (R) ಸುಳ್ಳಾಗಿದೆ

(D) (A) ಸುಳ್ಳಾಗಿದೆ, ಆದರೆ (R) ಸತ್ಯವಾಗಿದೆ



downloaded from: www.kpscvaani.com

**13.** Possession is prima facie evidence of title of ownership hence

(A) Long adverse possession confers title even to a property which originally belonged to another

(B) In all cases possession leads to ownership

(C) Transfer of possession is not a mode of transferring ownership

(D) Long adverse possession does not confer title to the property which originally belonged to another

**14.** "An eye for an eye" and "A tooth for a tooth" relates to

(A) Reformative theory

(B) Deterrent theory

(C) Retributive theory

(D) Preventive theory

**15.** Which one of the following doctrines requires that the parties to a treaty be bound to observe its terms is goodfaith ?

(A) The Drago doctrine

(B) Right of asylum

(C) Doctrine of equality

(D) Pacta Sunt Servanda

**16.** 'Dualism' denotes that International Law and State Law

(A) Represent two entirely distinct legal systems

(B) Are concomitant aspects of the one system law in general

(C) Are not enforceable

(D) Are not binding

**17.** Which of the following statements are associated with the declaratory theory of recognition of states ?

I. Recognition is declaratory of the existing facts

II. Recognition is constitutive of the existing facts

III. Recognition is a key to the membership of the international community

IV. Recognition is a political act

**Codes :**

(A) I and II

(B) I, III and IV

(C) II and III

(D) I and IV

**18.** **Assertion (A)** : The U.N. General Assembly has power to authorize U.N. peace keeping operations.

**Reason (R)** : The General Assembly represents the entire membership of the United Nations.

**Codes :**

(A) Both (A) and (R) are true and (R) is the correct explanation of (A)

(B) Both (A) and (R) are true but (R) is not correct explanation of (A)

(C) (A) is true but (R) is false

(D) (A) is false but (R) is true



downloaded from: www.kpscvaani.com

**19.** ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿರಿ ಮತ್ತು ಕೆಳಗೆ ನೀಡಲಾದ ಸಂಕೇತಗಳನ್ನು ಉಪಯೋಗಿಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

| **ಪಟ್ಟಿ – I** | **ಪಟ್ಟಿ – II** |
|---|---|
| a. ಕಾರ್ಫ್ಯೂ ಚ್ಯಾನೆಲ್ ಕೇಸ್ | 1. ಬಾವುಟ ರಾಜ್ಯ ನ್ಯಾಯವ್ಯಾಪ್ತಿ |
| b. ಲೋಟಸ್ ಕೇಸ್ | 2. ಪ್ರದೇಶ ಸ್ವಾಧೀನ |
| c. ವೆಸ್ಟರ್ನ್ ಸಹರಾ ಕೇಸ್ | 3. ಮುಗ್ಧ ಪ್ಯಾಸೆಜ್ ಹಕ್ಕು |
| d. ಗಲ್ಫ್ ಆಫ್ ಮೇನ್ ಕೇಸ್ | 4. ಮ್ಯಾರಿಟೈಮ್ ಗಡಿಯ ಡಿ–ಲಿಮಿಟೇಶನ್ |

**ಸಂಕೇತಗಳು :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 2 | 1 | 3 | 4 |
| (C) | 3 | 1 | 2 | 4 |
| (D) | 3 | 4 | 1 | 2 |

**20.** ಮಾನವ ಹಕ್ಕುಗಳ ಮೇಲಿನ ಯುರೋಪಿಯನ್ ಸಮ್ಮೇಳನ ಪ್ರಮುಖವಾಗಿ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?

(A) ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳು

(B) ಪರಿಸರ ಹಕ್ಕುಗಳು

(C) ನಾಗರಿಕ ಮತ್ತು ರಾಜಕೀಯ ಹಕ್ಕುಗಳು

(D) ಆರ್ಥಿಕ ಸ್ವಾತಂತ್ರ್ಯ

**21.** ''ಹಿಂದೂ ವಿವಾಹ ಕಾಯಿದೆ 1955''ರ ಅಡಿಯಲ್ಲಿ ಸಪಿಂಡ ಸಂಬಂಧ ಎಂದರೆ

(A) ತಾಯಿ ಮೂಲಕ ಆರೋಹಣ ಸಾಲಿನಲ್ಲಿ ಮೂರು ಜನಾಂಗಗಳವರೆಗೆ

(B) ತಾಯಿ ಮೂಲಕ ಆರೋಹಣ ಸಾಲಿನಲ್ಲಿ ಐದು ಜನಾಂಗದವರೆಗೆ

(C) ತಂದೆ ಮೂಲಕ ಆರೋಹಣ ಸಾಲಿನಲ್ಲಿ ಐದು ಜನಾಂಗಗಳವರೆಗೆ

(D) (A) ಮತ್ತು (C) ಎರಡೂ

**22.** ಕೆಳಗಿನವುಗಳಲ್ಲಿ ಯಾವುದು ಅನನ್ಯವಾಗಿ ಹಿಂದೂ ಕಾನೂನಿನ ಪ್ರಾಚೀನ ಮೂಲಗಳಿಗೆ ಸಂಬಂಧಿಸಿರುವುದಿಲ್ಲ?

(A) ಶೃತಿ, ಸ್ಮೃತಿ, ಪೂರ್ವನಿದರ್ಶನ

(B) ಶೃತಿ, ಸ್ಮೃತಿ, ಸಂಪ್ರದಾಯ

(C) ಸ್ಮೃತಿ, ಡೈಜೆಸ್ಟ್‌ಗಳು, ಸಂಪ್ರದಾಯ

(D) ಶೃತಿ, ಸ್ಮೃತಿ, ಡೈಜೆಸ್ಟ್‌ಗಳು

**23.** ಹಿಂದೂ ವಿವಾಹ ಕಾಯಿದೆ, 1955ಕ್ಕೆ ಸಂಬಂಧಿಸಿ, ಕೆಳಗಿನ ಸಂಕೇತಗಳನ್ನು ಉಪಯೋಗಿಸುವುದರ ಮೂಲಕ ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಸರಿ ಹೊಂದಿಸಿರಿ.

| **ಪಟ್ಟಿ – I** | **ಪಟ್ಟಿ – II** |
|---|---|
| a. ಸೆಕ್ಷನ್ 5 | I. ರದ್ದಾದ ವಿವಾಹ |
| b. ಸೆಕ್ಷನ್ 7 | II. ದಾಂಪತ್ಯ ಹಕ್ಕುಗಳನ್ನು ಮರಳಿ ಕೊಡು |
| c. ಸೆಕ್ಷನ್ 9 | III. ವಿವಾಹದ ಸ್ಥಿತಿಗಳು |
| d. ಸೆಕ್ಷನ್ 11 | IV. ವಿವಾಹ ಸಂಸ್ಕಾರಗಳು |

**ಸಂಕೇತಗಳು :**

| | a | b | c | d |
|---|---|---|---|---|
| (A) | I | II | III | IV |
| (B) | III | IV | II | I |
| (C) | II | III | IV | I |
| (D) | I | IV | III | II |



downloaded from: www.kpscvaani.com

**19.** Match List – I with List – II and select the correct answer by using the codes given below :

| List – I | List – II |
|---|---|
| a. Corfu channel cafe | 1. Flag state jurisdiction |
| b. Lotus cafe | 2. Occupation of territory |
| c. Western Sahara cafe | 3. Right to innocent passage |
| d. Gulf of main cafe | 4. De-limitation of maritime boundary |

**Codes :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 2 | 1 | 3 | 4 |
| (C) | 3 | 1 | 2 | 4 |
| (D) | 3 | 4 | 1 | 2 |

**20.** The European Convention on Human Rights is pre-dominantly concerned with which of the following ?

(A) Economic and Social Rights

(B) Environmental Rights

(C) Civil and Political Rights

(D) Economic Freedom

**21.** 'Sapinda Relationship' under the Hindu Marriage Act, 1955 is

(A) Upto 3 generations in the line of ascent through mother

(B) Upto 5 generations in the line of ascent through mother

(C) Upto 5 generations in the line of ascent through father

(D) Both (A) and (C)

**22.** Which of the following do not exclusively relate to the ancient sources of Hindu Law ?

(A) Shruti, Smriti, Precedent

(B) Shruti, Smriti, Custom

(C) Smriti, Digests, Custom

(D) Shruti, Smriti, Digests

**23.** Match List – I with List – II with reference to the Hindu Marriage Act, 1955 by using following codes :

| List – I | List – II |
|---|---|
| a. Sec. 5 | I. Void Marriage |
| b. Sec. 7 | II. Restitution of Conjugal Rights |
| c. Sec. 9 | III. Conditions of Marriage |
| d. Sec. 11 | IV. Ceremonies of Marriage |

**Codes :**

| | a | b | c | d |
|---|---|---|---|---|
| (A) | I | II | III | IV |
| (B) | III | IV | II | I |
| (C) | II | III | IV | I |
| (D) | I | IV | III | II |



downloaded from: www.kpscvaani.com

**24.** ವಿಚ್ಛೇದನದ ನಂತರ ಓರ್ವ ಮುಸ್ಲಿಂ ಮಹಿಳೆ

(A) ಮರು ವಿವಾಹವಾಗುವಂತಿಲ್ಲ

(B) ತಕ್ಷಣ ಮರು ವಿವಾಹವಾಗಬಹುದು

(C) ಇದ್ದತ್ ಅವಧಿ ಮುಗಿದ ನಂತರವಷ್ಟೇ ಮರು ವಿವಾಹವಾಗಬಹುದು

(D) ವಿಚ್ಛೇದಿತ ಪತಿಯೊಂದಿಗೆ ತಕ್ಷಣ ವಿವಾಹವಾಗಬಹುದು

**25.** ಹಿಂದೂ ವಿವಾಹ ಕಾಯಿದೆ 1955ರಲ್ಲಿ ವಿಚ್ಛೇದನ ಮುರಿದು ಬೀಳುವ ಸಿದ್ಧಾಂತ ಪ್ರತಿಫಲಿಸಿದೆ.

(A) ಸೆಕ್ಷನ್ 13(1)

(B) ಸೆಕ್ಷನ್ 13(2)

(C) ಸೆಕ್ಷನ್ 13 – B

(D) ಸೆಕ್ಷನ್ 13 (1 – A)

**26.** ಮುಸ್ಲಿಂರಲ್ಲಿ ಅತ್ಯಂತ ಅಂಗೀಕೃತ ವಿಚ್ಛೇದನ ಎಂದರೆ

(A) ಹಸನ್ - ತಲಾಕ್

(B) ಅಹಸನ್ - ತಲಾಕ್

(C) ತಲಾಕ್-ಉಲ್-ಸುನ್ನತಿ

(D) ತಲಾಕ್-ಉಲ್-ಬಿದ್ದತ್

**27.** **ಪ್ರತಿಪಾದನೆ(A)** : ಒಂದು ರದ್ದಾದ ಕರಾರು ಕಾನೂನು ಬಾಹಿರವಾಗಿರಲೇಬೇಕೆಂದೇನಿಲ್ಲ.

**ತರ್ಕ (R)** : ಪ್ರತಿ ಕಾನೂನುಬಾಹಿರ ಕರಾರು ರದ್ದಾಗಿರುತ್ತದೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಸತ್ಯ ಮತ್ತು (R), (A)ಯ ಸರಿಯಾದ ವಿವರಣೆಯಾಗಿದೆ

(B) (A) ಮತ್ತು (R) ಎರಡೂ ಸತ್ಯವಾಗಿದೆ ಮತ್ತು (R), (A)ಯ ಸರಿಯಾದ ವಿವರಣೆ ಆಗಿರುವುದಿಲ್ಲ

(C) (A) ಸತ್ಯವಾಗಿದೆ, ಆದರೆ (R) ಸುಳ್ಳಾಗಿದೆ

(D) (A) ಸುಳ್ಳಾಗಿದೆ, ಆದರೆ (R) ಸತ್ಯವಾಗಿದೆ

**28.** ಭಾರತೀಯ ಕರಾರು ಕಾಯಿದೆ 1872ಕ್ಕೆ ಸಂಬಂಧಿಸಿ, ಕೆಳಗಿನ ಸಂಕೇತಗಳನ್ನು ಬಳಸಿ ಪಟ್ಟಿ – I ನ್ನು, ಪಟ್ಟಿ – IIರೊಂದಿಗೆ ಸರಿಹೊಂದಿಸಿರಿ.

| **ಪಟ್ಟಿ – I** | **ಪಟ್ಟಿ – II** |
|---|---|
| a. ಪರಿಗಣನೆರಹಿತ ಒಪ್ಪಂದ | 1. ಸೆಕ್ಷನ್ 56 |
| b. ವಿವಾಹ ನಿರ್ಬಂಧ ಒಪ್ಪಂದ | 2. ಸೆಕ್ಷನ್ 26 |
| c. ಕಾನೂನು ಪ್ರಕ್ರಿಯೆ ನಿರ್ಬಂಧ ಒಪ್ಪಂದ | 3. ಸೆಕ್ಷನ್ 28 |
| d. ಅಸಾಧ್ಯ ಕೆಲಸಗಳನ್ನು ಮಾಡಲು ಒಪ್ಪಂದ | 4. ಸೆಕ್ಷನ್ 25 |

**ಸಂಕೇತಗಳು :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 4 | 1 | 3 | 2 |
| (C) | 3 | 1 | 4 | 2 |
| (D) | 4 | 2 | 3 | 1 |

**29.** ಬಲವಂತದಿಂದ, ಅನುಚಿತ ಪ್ರಭಾವದಡಿಯಲ್ಲಿ ಮೋಸದಿಂದ ಅಥವಾ ತಪ್ಪು ಮಾಹಿತಿಯಿಂದ ಪ್ರವೇಶ ಪಡೆದ(ದಾಖಲಿಸಲ್ಪಟ್ಟ) ಕರಾರನ್ನು ಹೀಗೆಂದು ಹೇಳಲಾಗಿದೆ

(A) ಅನೂರ್ಜಿತಗೊಳ್ಳುವ ಕರಾರು

(B) ಅನೂರ್ಜಿತಗೊಂಡ ಕರಾರು

(C) ಕಾನೂನುಬಾಹಿರ ಕರಾರು

(D) ಜಾರಿಗೆ ತರಲಾಗದ ಕರಾರು

**30.** ಪರಿಗಣನೆ

(A) ಕಾನೂನಿನ ಕಣ್ಣಿನಲ್ಲಿ ಸ್ವಲ್ಪ ಮೌಲ್ಯವುಳ್ಳದ್ದಾಗಿರಬೇಕು

(B) ವಾಸ್ತವವಾಗಿರಬೇಕು

(C) ಭ್ರಮೆಯಾಗಿರಬಾರದು

(D) A, B ಮತ್ತು C



downloaded from: www.kpscvaani.com

**24.** After divorce a Muslim women
(A) Cannot re-marry
(B) Can re-marry immediately
(C) Can marry only after completion of Iddat period
(D) Can immediately marry with divorced husband

**25.** Breakdown theory of divorce is reflected in _____ of the Hindu Marriage Act, 1955.
(A) Sec. 13(1)
(B) Sec. 13(2)
(C) Sec. 13 – B
(D) Sec. 13(1 – A)

**26.** The most proper or approved divorce among Muslims is
(A) Hasan – Talak
(B) Ahasan – Talak
(C) Talak – UL – Sunnati
(D) Talak – UL – Biddat

**27.** **Assertion (A)** : A void contract is not necessarily illegal.

**Reason (R)** : Every illegal contract is void.

**Codes :**
(A) Both (A) and (R) are true and (R) is the correct explanation of (A)
(B) Both (A) and (R) are true but (R) is not correct explanation of (A)
(C) (A) is true but (R) is false
(D) (A) is false but (R) is true

**28.** Match List – I with List – II and select the correct answer with reference to the Indian Contract Act, 1872 by using the code given below :

| **List – I** | **List – II** |
|---|---|
| a. Agreement without consideration | 1. Sec. 56 |
| b. Agreement in restraint of marriage | 2. Sec. 26 |
| c. Agreement in restraint of legal proceeding | 3. Sec. 28 |
| d. Agreement to do impossible acts | 4. Sec. 25 |

**Codes :**

| | **a** | **b** | **c** | **d** |
|---|---|---|---|---|
| (A) | 1 | 2 | 3 | 4 |
| (B) | 4 | 1 | 3 | 2 |
| (C) | 3 | 1 | 4 | 2 |
| (D) | 4 | 2 | 3 | 1 |

**29.** A contract entered into out of coercion, undue influence, fraud or misrepresentation is said to be
(A) Voidable contract
(B) Void contract
(C) Illegal contract
(D) Un-enforceable contract

**30.** Consideration
(A) Must have some value in the eyes of law
(B) Must be real
(C) Must not be illusory
(D) A, B and C



downloaded from: www.kpscvaani.com

**31.** ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿ ಆಗಿದೆ/ ಆಗಿವೆ ?

1. ಪ್ರತಿ ಕೊಡುಗೆ (ಕೌಂಟರ್ ಆಫರ್) ಮೂಲ ಆಫರ್‌ಗೆ ಕೊನೆ ಹಾಡುತ್ತದೆ.
2. ಕೌಂಟರ್ ಆಫರ್‌ನಲ್ಲಿ ಹಿಂದಿನ ಆಫರ್‌ಗೆ ಮರುಜೀವ ಕೊಡಬಹುದು.
3. ಸ್ವೀಕಾರವು ಪರಿಪೂರ್ಣವಾಗಿರಬೇಕು ಮತ್ತು ಷರತ್ತುರಹಿತವಾಗಿರಬೇಕು.
4. ಹೊಸ ಷರತ್ತುಗಳೊಂದಿಗೆ ಸ್ವೀಕಾರ ಸಿಂಧುವಾಗಿದೆ.

ಕೆಳಗೆ ನೀಡಲಾದ ಸಂಕೇತಗಳನ್ನು ಉಪಯೋಗಿಸಿ, ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.

**ಸಂಕೇತಗಳು :**

(A) 1 ಮಾತ್ರ

(B) 1 ಮತ್ತು 3

(C) 2 ಮತ್ತು 3

(D) 3 ಮತ್ತು 4

**32.** ಅಪ್ರಾಪ್ತ ವಯಸ್ಕನ ಒಪ್ಪಂದ ಅನೂರ್ಜಿತ ಪ್ರಸ್ತಾವನೆಯನ್ನು ಇದರಲ್ಲಿ ಮಾಡಲಾಗಿದೆ.

(A) ನಿಹಾಲ್ ಚಂದ್ Vs ಜಾನ್‌ಖಾನ್

(B) ಶ್ರೀಕೃಷ್ಣ Vs ಕುರುಕ್ಷೇತ್ರ ವಿಶ್ವವಿದ್ಯಾನಿಲಯ

(C) ಮೋಹೊರಿಬೀಬಿ Vs ಧರಮ್‌ದಾಸ್ ಘೋಷ್

(D) ನಂಜಪ್ಪ Vs ಮುತ್ತುಸ್ವಾಮಿ

**33.** ಪಟ್ಟಿ – I ನ್ನು, ಪಟ್ಟಿ – II ರೊಂದಿಗೆ ಹೊಂದಿಸಿರಿ ಮತ್ತು ಕೆಳಗೆ ನೀಡಲಾದ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.

| **ಪಟ್ಟಿ – I** | **ಪಟ್ಟಿ – II** |
|---|---|
| a. ಡ್ಯಾಮ್ನಮ್ ಸೈನ್ ಇಂಜ್ಯುರಿಯಾ | 1. ನೇರವಾಗಿಲ್ಲ |
| b. ಇಂಜ್ಯುರಿಯಾ ಸೈನ್ ಡ್ಯಾಮ್ನಮ್ | 2. ಪರಿಹಾರವಿಲ್ಲದ ತಪ್ಪಿಲ್ಲ |
| c. ಉಬಿ–ಜಸ್–ಇಬಿ–ರೆಮಿಡಿಯಮ್ | 3. ಹಾನಿಯಿಲ್ಲದೆ ಕಾನೂನುಬದ್ಧ ಘಾಸಿ ಉಂಟು ಮಾಡುವಂಥದ್ದು |
| d. ಟಾರ್ಟಿಮ್ | 4. ಕಾನೂನುಬದ್ಧ ಘಾಸಿ ಇಲ್ಲದೆ ಹಾನಿ ಉಂಟುಮಾಡುವಂಥದ್ದು |

**ಸಂಕೇತಗಳು :**

| | **a** | **b** | **c** | **d** |
|---|---|---|---|---|
| (A) | 1 | 2 | 3 | 4 |
| (B) | 4 | 3 | 2 | 1 |
| (C) | 3 | 1 | 4 | 2 |
| (D) | 4 | 1 | 3 | 2 |

**34.** ಧನಿಯು ಇದಕ್ಕೆ ಹೊಣೆಯಾಗುತ್ತಾನೆ.

(A) ಸೇವಕನಿಂದ ಮಿತಿಮೀರಿದ ಅಥವಾ ತಪ್ಪಾದ ಅಧಿಕಾರದ ಬಳಕೆ

(B) ಸೇವಕ ಎಸಗಿದ ತಪ್ಪು

(C) (A) ಸತ್ಯವಾಗಿದೆ, ಆದರೆ (B) ಸುಳ್ಳಾಗಿದೆ

(D) (A) ಮತ್ತು (B) ಎರಡೂ ಸತ್ಯವಾಗಿದೆ



downloaded from: www.kpscvaani.com

**31.** Which of the following statement(s) is/are correct ?

1. Counter offer puts an end to the original offer.
2. In counter offer previous offer can be revived.
3. Acceptance must be absolute and un-qualified.
4. Acceptance with new terms is valid.

Select the correct answer by using the codes given below.

**Codes :**

(A) 1 only

(B) 1 and 3

(C) 2 and 3

(D) 3 and 4

**32.** A minors agreement is void. This preposition is made in

(A) Nihal Chand Vs Jan Khan

(B) Sree Krishna Vs Kurukshetra University

(C) Mohoribibi Vs Dharamdas Ghosh

(D) Nanjappa Vs Muthuswamy

**33.** Match List – I with List – II and select the correct answer by using the code given below :

| **List – I** | **List – II** |
|---|---|
| a. Damnum sine injuria | 1. Not straight |
| b. Injuria sine Damnum | 2. There is no wrong without remedy |
| c. Ubi-jus-ibi-remedium | 3. Causing legal injury without damage |
| d. Tortum | 4. Causing damage without legal injury |

**Codes :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 4 | 3 | 2 | 1 |
| (C) | 3 | 1 | 4 | 2 |
| (D) | 4 | 1 | 3 | 2 |

**34.** Master is liable for

(A) Excessive or erroneous use of authority by the servant

(B) Mistake by the servant

(C) (A) is true but (B) is false

(D) Both (A) and (B) are true



downloaded from: www.kpscvaani.com

**35.** ಕೆಳಗೆ ನೀಡಲಾದ ಸಂಕೇತಗಳನ್ನು ಬಳಸಿ, ಪಟ್ಟಿ – Iನ್ನು ಪಟ್ಟಿ– IIರೊಂದಿಗೆ ಸರಿಹೊಂದಿಸಿರಿ.

| **ಪಟ್ಟಿ – I** | **ಪಟ್ಟಿ – II** |
|---|---|
| a. ವಿಸ್ ಮೇಜರ್ | 1. ಶ್ರೇಷ್ಠನು ಹೊಣೆಗಾರನಾಗಲಿ |
| b. ನೋವಸ್ ಆ್ಯಕ್ಟಸ್ ಇಂಟರ್‌ವೀನಿಯೆನ್ಸ್ | 2. ದೈವ ಕಾರ್ಯ |
| c. ರೆಸ್ಪೋಂಡೆಂಟ್ ಸುಪೀರಿಯರ್ | 3. ತಿಳುವಳಿಕೆಯಿಂದ ಅನುಭವಿಸಿದ ಹಾನಿ |
| d. ವೊಲಂಟಿ–ನಾನ್‌ಫಿಟ್ ಇಂಜ್ಯುರಿಯಾ | 4. ಮೂರನೆಯ ಸಂಗತಿಯ ಮಧ್ಯಪ್ರವೇಶ |
| | 5. ಒಪ್ಪಿಗೆಯೊಂದಿಗೆ ಅನುಭವಿಸಿದ ಹಾನಿ |

**ಸಂಕೇತಗಳು :**

| | **a** | **b** | **c** | **d** |
|---|---|---|---|---|
| (A) | 1 | 2 | 3 | 4 |
| (B) | 2 | 4 | 1 | 5 |
| (C) | 4 | 3 | 1 | 2 |
| (D) | 3 | 2 | 1 | 4 |

**36.** ಕೊನೆಯ ಅವಕಾಶ ನಿಯಮ ಇದಾಗಿದೆ (ಸಹಾಯಕ ಕಡೆಗಣನೆಗೆ)

(A) ಕಡೆಗಣನೆಗೆ ಸಹಾಯಕವಾದುದಕ್ಕೆ ಅಪವಾದ

(B) ಕಡೆಗಣನೆಗೆ ಸಹಾಯಕವಾದುದಕ್ಕೆ ಬದಲಾವಣೆ

(C) ಕಡೆಗಣನೆಗೆ ಸಹಾಯಕವಾದುದಕ್ಕೆ ಪರ್ಯಾಯ

(D) ಕಡೆಗಣನೆಗೆ ಸಹಾಯಕವಾದುದಕ್ಕೆ ಉಪಬಂಧಗಳು

**37.** ಕಟ್ಟುನಿಟ್ಟಾದ ಹೊಣೆಗಾರಿಕೆಯ ಪರಿಧಿಯೊಳಗೆ ಪ್ರಕರಣವನ್ನು ತರಲು ಇದು ಅಗತ್ಯ.

(A) ತನ್ನ ಭೂಮಿಯ ಮೇಲೆ ವ್ಯಕ್ತಿಯೋರ್ವನು ಯಾವುದೇ ಅಪಾಯಕಾರಿ ವಸ್ತುವನ್ನು ತಂದಿರಬೇಕು

(B) ಆತ ತಂದ ವಸ್ತು ತಪ್ಪಿಸಿಕೊಳ್ಳಬೇಕು

(C) ಇದು ಭೂಮಿಯ ಅಸಹಜ ಬಳಕೆಯಾಗಿರಬೇಕು

(D) (A), (B) ಮತ್ತು (C)

**38.** ಹಾನಿಗೆ ದೂರವಾಗಿರುವುದನ್ನು ತಿಳಿಸುವುದು

(A) ನೇರವಂತಿಕೆಯ ಪರೀಕ್ಷೆ

(B) ದೂರವಿರುವುದರ ಪರೀಕ್ಷೆ

(C) (A) ಮತ್ತು (B) ಎರಡೂ

(D) (A) ಯೂ ಅಲ್ಲ , (B) ಯೂ ಅಲ್ಲ

**39.** Y ಪೊದೆಯೊಂದರ ಹಿಂದೆ ಇದ್ದಾನೆಂದು Xಗೆ ಗೊತ್ತು, Zಗೆ ಈ ವಿಚಾರ ಗೊತ್ತಿಲ್ಲ. Yನ ಸಾವನ್ನು ಉಂಟುಮಾಡಲು ಇಚ್ಛಿಸಿ ಅಥವಾ ಇದು ಸಾವನ್ನು ಉಂಟುಮಾಡುವುದು ಸಂಭವನೀಯ ಎಂದು ತಿಳಿದು X ಪೊದೆಯತ್ತ ಗುಂಡು ಹಾರಿಸುವಂತೆ Zನ್ನು ಪ್ರೇರೇಪಿಸುತ್ತಾನೆ. Z ಗುಂಡು ಹಾರಿಸಿ Yನ್ನು ಕೊಲ್ಲುತ್ತಾನೆ. ಇಲ್ಲಿ Z ಯಾವುದೇ ಅಪರಾಧದ ತಪ್ಪಿತಸ್ಥನಾಗದಿರಬಹುದು, ಆದರೆ

(A) X ಯಾವುದೇ ಅಪರಾಧ ಎಸಗಿಲ್ಲ

(B) X ದೂಷಣೀಯ ನರಹತ್ಯೆಯ ಅಪರಾಧವನ್ನು ಎಸಗಿದ್ದಾನೆ

(C) X ಕೊಲೆಯ ಅಪರಾಧವನ್ನು ಎಸಗಿದ್ದಾನೆ

(D) X ಸಹಾಯ ಮಾಡಿದ ಅಪರಾಧವನ್ನು ಎಸಗಿದ್ದಾನೆ

**40.** 'ಸಹಾಯಕವಾಗುವುದು' ಮತ್ತು 'ಅಪರಾಧಿಕ ಪಿತೂರಿ' ಎರಡೂ ಹೀಗೆ ಪರಿಗಣಿಸಲ್ಪಟ್ಟಿವೆ

(A) ಮಾನವ ದೇಹದ ವಿರುದ್ಧ ಅಪರಾಧ

(B) ಪೂರ್ವಭಾವಿ ಅಪರಾಧಗಳು

(C) ಪೂರ್ವಸಿದ್ಧತೆಯ ಅಪರಾಧಗಳು

(D) ಸಾಮಾನ್ಯ ಅಪವಾದಗಳು

**41.** ಅಪರಾಧ ಎಂದಾಗಲು 'ಕಾರ್ಯ' ಮತ್ತು 'ಉದ್ದೇಶ' ಎರಡೂ ಏಕಕಾಲದಲ್ಲಿ ಸಂಭವಿಸಬೇಕು. ಈ ಸಿದ್ಧಾಂತವು ಇವರಿಂದ ಪ್ರತಿಪಾದಿಸಲ್ಪಟ್ಟಿತು.

(A) ಕೀನ್ಯನ್ ಜೆ.

(B) ಪಾರ್ಕಿನ್‌ಸನ್ ಜೆ.

(C) ಕಾರ್ಡೋಝೊ ಜೆ.

(D) ಪಾರ್ಕರ್ ಜೆ.



downloaded from: www.kpscvaani.com

**35.** Match List – I with List – II and select the correct answer by using the code given below :

| **List – I** | **List – II** |
|---|---|
| a. Vis majore | 1. Let the superior be responsible |
| b. Novus actus interveniens | 2. Act of God |
| c. Respondent superior | 3. Harm suffered with knowledge |
| d. Volunti-nonfit injuria | 4. Intervention of a third factor |
| | 5. Harm suffered with consent |

**Codes :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 2 | 4 | 1 | 5 |
| (C) | 4 | 3 | 1 | 2 |
| (D) | 3 | 2 | 1 | 4 |

**36.** Last opportunity rule is

(A) An exception to contributory negligence

(B) A modification to contributory negligence

(C) An alternative to contributory negligence

(D) Supplements to contributory negligence

**37.** To bring the case within the ambit of strict liability, the following are necessary

(A) Some dangerous thing must have been brought by a person in his land

(B) The thing brought by a person on his land must escape

(C) It must be non-natural use of land

(D) (A), (B) and (C)

**38.** Remoteness of damage is determined by

(A) The test of directness

(B) The test of remoteness

(C) Both (A) and (B )

(D) Neither (A) nor (B)

**39.** 'X' knows 'Y' to be behind a bush. 'Z' does not know it. 'X' intending to cause knowing it to be likely to cause 'Y' is death, induces 'Z' to fire at the bush. 'Z' fires and kills 'Y'. Here 'Z' may be guilty of no offence, but

(A) 'X' has not committed any offence

(B) 'X' has committed the offence of culpable homicide

(C) 'X' has committed offence of murder

(D) 'X' has committed the offence of abetment

**40.** Both 'Abetment' and 'Criminal conspiracy' are considered as

(A) Offences against human body

(B) Preliminary offences

(C) Preparatory offences

(D) General exceptions

**41.** "Both 'act' and 'intent' must concur to constitute the crime". This principle was profounded by

(A) Kenyan J.

(B) Parkinson J.

(C) Cordozo J.

(D) Parker J.



downloaded from: www.kpscvaani.com

**42.** **ಪ್ರತಿಪಾದನೆ (A)** : 'X ಬುದ್ಧಿ ಸ್ಥಿಮಿತ ಇಲ್ಲದಿರುವುದರಿಂದ ಮತ್ತು ದಾಳಿಯ ಸ್ವರೂಪ ಗೊತ್ತಿಲ್ಲದಿರುವುದರಿಂದY ಮೇಲೆ ದಾಳಿ ಮಾಡುತ್ತಾನೆ. Y ದಾಳಿಯನ್ನು ತಪ್ಪಿಸಿಕೊಳ್ಳಲು ಮತ್ತು ಆತ್ಮರಕ್ಷಣೆಯಲ್ಲಿ Xಗೆ ಹೊಡೆದು ಅವನನ್ನೇ ಗಾಯಗೊಳಿಸುತ್ತಾನೆ. Yಯು ಯಾವುದೇ ಅಪರಾಧವನ್ನು ಎಸಗುವುದಿಲ್ಲ.

**ತರ್ಕ (R) :** ಭಾರತೀಯ ಅಪರಾಧ ಸಂಹಿತೆ ಸೆಕ್ಷನ್ 98ರ ಪ್ರಕಾರ Yಗೆ Xನ ವಿರುದ್ಧ ಖಾಸಗಿ ರಕ್ಷಣೆಯ ಅಧಿಕಾರವಿದೆ.

(A) (A) ಮತ್ತು (R) ಎರಡೂ ಸತ್ಯ ಮತ್ತು (R),(A)ನ ಸರಿಯಾದ ವಿವರಣೆಯಾಗಿದೆ

(B) (A) ಮತ್ತು (R) ಎರಡೂ ಸತ್ಯ, ಆದರೆ (R), (A)ನ ಸರಿಯಾದ ವಿವರಣೆ ಆಗಿರುವುದಿಲ್ಲ

(C) (A) ಸತ್ಯವಾಗಿದೆ, ಆದರೆ (R) ಸುಳ್ಳಾಗಿದೆ

(D) (A) ಸುಳ್ಳಾಗಿದೆ, ಆದರೆ (R) ಸತ್ಯವಾಗಿದೆ

**43.** ಮಹಿಳೆಯೋರ್ವಳಿಗೆ ಅವಳ ಗಂಡನಿಂದ ಅಥವಾ ಗಂಡನ ಸಂಬಂಧಿಕರಿಂದ ಹಿಂಸೆಯು ಭಾ.ಅ.ಸಂ. ಯ ಸೆಕ್ಷನ್ _______ ಅಡಿಯಲ್ಲಿ ವ್ಯಾಖ್ಯಾನಿಸಲ್ಪಟ್ಟಿದೆ.

(A) ಸೆಕ್ಷನ್ 497 – A

(B) ಸೆಕ್ಷನ್ 498

(C) ಸೆಕ್ಷನ್ 498 – A

(D) ಸೆಕ್ಷನ್ 495

**44.** ಕೆಳಗೆ ನೀಡಲಾದ ಸಂಕೇತಗಳನ್ನು ಉಪಯೋಗಿಸಿ ಪಟ್ಟಿ - I ನ್ನು ಪಟ್ಟಿ - II ರೊಂದಿಗೆ ಸರಿಹೊಂದಿಸಿರಿ.

| ಪಟ್ಟಿ - I | ಪಟ್ಟಿ - II |
|---|---|
| a. ಸೆಕ್ಷನ್ 120 B | 1. ವ್ಯಭಿಚಾರ |
| b. ಸೆಕ್ಷನ್ 107 | 2. ವರದಕ್ಷಿಣೆ ಸಾವು |
| c. ಸೆಕ್ಷನ್ 304 – B | 3. ಅಪರಾಧಿಕ ಪಿತೂರಿ |
| d. ಸೆಕ್ಷನ್ 497 | 4. ಸಹಾಯ |

**ಸಂಕೇತಗಳು :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 3 | 4 | 2 | 1 |
| (C) | 4 | 3 | 1 | 2 |
| (D) | 2 | 4 | 3 | 1 |

**45.** ಔದ್ಯಮಿಕ ಗಾಯಗಳಿಗೆ ಕೋರ್ಟಿನಲ್ಲಿ ಹೊಣೆಗಾರಿಕೆ ಆಧಾರದ ಮೇಲೆ ಅಪರಿಮಿತ ಹೊಣೆಗಾರಿಕೆ ಸಿದ್ಧಾಂತವು ಇವರಿಂದ ಪ್ರತಿಪಾದಿಸಲ್ಪಟ್ಟಿತು

(A) ಬ್ಲ್ಯಾಕ್ ಬರ್ನ್ ಜೆ.

(B) ವಿ. ಆರ್. ಕೃಷ್ಣ ಅಯ್ಯರ್ ಜೆ.

(C) ಪಿ. ಎನ್. ಭಗವತಿ ಜೆ.

(D) ಲಾರ್ಡ್ ಆಟ್ಕಿನ್

**46.** ಕೆಳಗಿನ ಪ್ರಕರಣಗಳಲ್ಲಿ ಯಾವುದರಲ್ಲಿ ಸುಪ್ರೀಂ ಕೋರ್ಟ್ ವಿಶ್ವವಿದ್ಯಾಲಯವು ''ಉದ್ಯಮಗಳ ಮಾತೆ'' ಎಂದು ಅಭಿಪ್ರಾಯಪಟ್ಟಿದೆ ?

(A) ಮುಕುಂದ್ ಐಯರ್ನ್ ಮತ್ತು ಸ್ಟೀಲ್ ಕೇಸ್

(B) ಜೇ ಎಂಜಿನಿಯರಿಂಗ್ ಕೇಸ್

(C) BWSSB Vs ಎ. ರಾಜಪ್ಪ

(D) ಮದ್ರಾಸ್ ಜಿಮ್‌ಖಾನ ಕೇಸ್



downloaded from: www.kpscvaani.com

**42.** **Assertion (A)** : 'X' because of unsoundness of mind and not knowing the nature of the act, attacks 'Y', who in self defence and in order to ward off the attack, hits him thereby injuring him. 'Y' has not committed an offence.

**Reason (R)** : 'Y' had a right of private defence against 'X' under Section 98 of IPC.

(A) Both (A) and (R) are true and (R) is the correct explanation of (A)

(B) Both (A) and (R) are true, but (R) is not correct explanation of (A)

(C) (A) is true but (R) is false

(D) (A) is false but (R) is true

**43.** Cruelty to a women by her husband or relative of husband is defined under Sec. __________ of IPC.

(A) Sec. 497 – A

(B) Sec. 498

(C) Sec. 498 – A

(D) Sec. 495

**44.** Match the following in List – I with List – II by using code given below :

| **List – I** | **List – II** |
|---|---|
| a. Sec. 120 B | 1. Adultery |
| b. Sec. 107 | 2. Dowry death |
| c. Sec. 304 – B | 3. Criminal conspiracy |
| d. Sec. 497 | 4. Abetment |

**Codes :**

| | **a** | **b** | **c** | **d** |
|---|---|---|---|---|
| (A) | 1 | 2 | 3 | 4 |
| (B) | 3 | 4 | 2 | 1 |
| (C) | 4 | 3 | 1 | 2 |
| (D) | 2 | 4 | 3 | 1 |

**45.** The assolute liability theory as the basis for liability in court for industrial injuries was profounded by

(A) Blackburn J.

(B) V. R. Krishna Iyer J.

(C) P. N. Bhagawati J.

(D) Lord Atkin

**46.** The university is held as 'mother of industries' by the Supreme Court in which of the following case

(A) Mukund Iron and steel case

(B) Jay engineering case

(C) BWSSB Vs A. Rajappa

(D) Madras Gymkhana case



downloaded from: www.kpscvaani.com

**47.** ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಸರಿ ಹೊಂದಿಸಿ ಮತ್ತು ಕೆಳಗೆ ನೀಡಲಾದ ಸಂಕೇತಗಳನ್ನು ಉಪಯೋಗಿಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

| **ಪಟ್ಟಿ - I** | **ಪಟ್ಟಿ - II** |
|---|---|
| a. ಐ.ಡಿ. ಕಾಯಿದೆಯ ಸೆಕ್ಷನ್ 2(f) | 1. (ಲೇಬರ್ ಕೋರ್ಟ್) ಕಾರ್ಮಿಕ ನ್ಯಾಯಾಲಯ |
| b. ಐ.ಡಿ. ಕಾಯಿದೆಯ ಸೆಕ್ಷನ್ 2(s) | 2. ನ್ಯಾಯಾಲಯ |
| c. ಐ.ಡಿ. ಕಾಯಿದೆಯ ಸೆಕ್ಷನ್ 10 – A | 3. ವೇಲ್‌ಮೆನ್ |
| d. ಐ.ಡಿ. ಕಾಯಿದೆಯ ಸೆಕ್ಷನ್ 7 | 4. ಸ್ವೇಚ್ಛೆಯ ಮಧ್ಯಸ್ಥಿಕೆ |

**ಸಂಕೇತಗಳು :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 4 | 3 | 2 | 1 |
| (C) | 3 | 4 | 1 | 2 |
| (D) | 2 | 3 | 4 | 1 |

**48.** ''ಕೊನೆಗೆ ಬಂದವರು ಮೊದಲು ಹೋಗುತ್ತಾರೆ'' ಎಂಬ ಸಿದ್ಧಾಂತವು ಔದ್ಯಮಿಕ ವಿವಾದಗಳು ಐ.ಡಿ. ಕಾಯಿದೆ, 1947 ರ _______ ಅಡಿಯಲ್ಲಿ ಶಾಸನಾತ್ಮಕವಾಗಿ ಮಾನ್ಯ ಮಾಡಲ್ಪಟ್ಟಿದೆ.

(A) ಸೆಕ್ಷನ್ 25 (C)

(B) ಸೆಕ್ಷನ್ 25 (G)

(C) ಸೆಕ್ಷನ್ 25 (A)

(D) ಸೆಕ್ಷನ್ 25 (O)

**49.** **ಪ್ರತಿಪಾದನೆ (A)** : ಐ.ಡಿ. ಕಾಯಿದೆಯ ಸೆಕ್ಷನ್ 22 ರ ಅಡಿಯಲ್ಲಿ ಹರತಾಳದ ನೋಟಿಸ್ ನೀಡಿ, ಸಾರ್ವಜನಿಕ ಉಪಯುಕ್ತತೆ ಸೇವೆ ಉದ್ಯಮಗಳಲ್ಲಿ ಹರತಾಳ ಘೋಷಿಸುವುದು ಕಾನೂನು ಬಾಹಿರವಾಗಿದೆ.

**ಕಾ (R)** : ಕಾರ್ಮಿಕರು ಈಗಾಗಲೇ ಹರತಾಳದಲ್ಲಿರುವಾಗ, ಸೆಕ್ಷನ್ 22ರ ಅಡಿಯಲ್ಲಿ ನೋಟಿಸ್ ನೀಡದೆ ಬೀಗಮುದ್ರೆ (ಲಾಕ್‌ಔಟ್) ಘೋಷಣೆ ಕಾನೂನುಬಾಹಿರವಾಗುವುದಿಲ್ಲ.

(A) (A) ಮತ್ತು (R) ಎರಡೂ ಸತ್ಯ ಮತ್ತು (R), (A)ನ ಸರಿಯಾದ ವಿವರಣೆ ಆಗಿರುವುದಿಲ್ಲ

(B) (A) ಮತ್ತು (R) ಎರಡೂ ಸತ್ಯ ಮತ್ತು (R), (A)ನ ಸರಿಯಾದ ವಿವರಣೆ

(C) (A) ಸತ್ಯವಾಗಿದೆ, ಆದರೆ (R) ಸುಳ್ಳಾಗಿದೆ

(D) (A) ಸುಳ್ಳಾಗಿದೆ, ಆದರೆ (R) ಸತ್ಯವಾಗಿದೆ

**50.** ಟ್ರೇಡ್ ಯೂನಿಯನ್‌ನ ನೋಂದಾವಣೆಯನ್ನು ನೋಟಿಸ್ ನೀಡದೆ ರದ್ದು ಪಡಿಸಬಹುದು

(A) ರದ್ಧತಿ ಕೋರಿ ಟ್ರೇಡ್ ಯೂನಿಯನ್ ಅರ್ಜಿಯ ಮೇರೆಗೆ

(B) ಟ್ರೇಡ್ ಯೂನಿಯನ್ ಅಸ್ತಿತ್ವವು ಕೊನೆಗೊಂಡಿರುವಾಗ

(C) ಮೋಸ ಅಥವಾ ತಪ್ಪಿನಿಂದಾಗಿ ನೋಂದಾವಣೆಯನ್ನು ಪಡೆದುಕೊಂಡಲ್ಪಟ್ಟಿದ್ದಲ್ಲಿ

(D) ಟ್ರೇಡ್ ಯೂನಿಯನ್ ಸಕಾಲದಲ್ಲಿ ವಾರ್ಷಿಕ ರಿಟರ್ನ್‌ಗಳನ್ನು ಸಲ್ಲಿಸಲು ವಿಫಲವಾದಾಗ



downloaded from: www.kpscvaani.com

**47.** Match List – I with List – II and select the correct answer by using the code given below :

| List – I | List – II |
|---|---|
| a. Sec. 2(f) of I.D. Act | 1. Labor court |
| b. Sec. 2(s) of I.D. Act | 2. Court |
| c. Sec. 10 – A of I.D. Act | 3. Walemen |
| d. Sec. 7 of I.D. Act | 4. Voluntary arbitration |

**Codes :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 4 | 3 | 2 | 1 |
| (C) | 3 | 4 | 1 | 2 |
| (D) | 2 | 3 | 4 | 1 |

**48.** The principle "Last come first go" is statutorily recognised under ______ of the Industrial Disputes Act, 1947.

(A) Sec. 25 (C)

(B) Sec. 25 (G)

(C) Sec. 25 (A)

(D) Sec. 25 (O)

**49. Assertion (A)** : Declaration of strike in public utility service industries with issuance of notice of strike under Sec. 22 of I.D. Act is unlawful.

**Reason (R)** : Declaration of lockout without issuance of notice under Sec. 22 is not unlawful when workmen are already on strike.

(A) Both (A) and (R) are true and (R) is not correct explanation of (A)

(B) Both (A) and (R) are true and (R) is the correct explanation of (A)

(C) (A) is true but (R) is false

(D) (A) is false but (R) is true

**50.** The registration of the Trade Union can be cancelled without issuing notice

(A) On the application of the Trade Union requesting for cancellation

(B) The Trade Union has ceased to exist

(C) If the registration has been obtained by fraud or mistake

(D) When the Trade Union has failed to submit its annual returns in time



downloaded from: www.kpscvaani.com

ಚಿತ್ತು ಬರಹಕ್ಕಾಗಿ ಸ್ಥಳ

Space for Rough Work



downloaded from: www.kpscvaani.com